**ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ.**
**ನ್ಯಾಯಾಲಯ ಮಾಗಡಿ**

**ಕ್ರಿಮಿನಲ್ ಪ್ರಕರಣ ಸಂಖ್ಯೆ ಃ 1966 /2023**

**ಚಾಸಾ ಃ- 02 / ಪ್ರಾಸಾ ಃ- 03**

| | |
|---|---|
| ಹೆಸರು | ಮಾಳಗಪ್ಪ |
| ತಂದೆ ಹೆಸರು | ಮಾಳಗಪ್ಪ |
| ವಯಸ್ಸು | 80 |
| ಉದ್ಯೋಗ | ವ್ಯವಸಾಯ |
| ವಿಳಾಸ | ಗವಿನಾಗಮಂಗಲ |

ದಿನಾಂಕಃ **02-12-2023** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ-**

ಚಾಸಾ-1 , 2 ಮತ್ತು 4 ರವರು ಪರಿಚಯ ಇರುತ್ತಾರೆ. ಆರೋಪಿಯು ಪರಿಚಯ ಇರುತ್ತಾರೆ. 20 ತಿಂಗಳ ಹಿಂದೆ ಸಮಯ ರಾತ್ರಿ 9.30 ಗಂಟೆಗೆ ಮಾಗಡಿ ರಸ್ತೆಯಲ್ಲಿ ನನಗೆ ಅಡ್ಡಹಾಕಿ ನರಸೇಗೌಡ ಎಂಬುವವರು ಹೆಲ್ಮೆಟ್ ನಿಂದ ಹಲ್ಲೆ ಮಾಡಿರುತ್ತಾರೆ. ನಾನು ಅಶೋಕನನ್ನು ಬಿಡಿಸಲು ಹೋದಾಗ ನನಗೂ ಹಲ್ಲೆ ಮಾಡಿರುತ್ತಾರೆ. ನಂತರ ನಾನು ಕೆಳಗೆ ಬಿದ್ದು ಹೋಗಿದ್ದೆನು. ಸದರಿ ಹೆಲ್ಮೆಟ್ ಅನ್ನು ನೋಡಿದರೆ ಗುರುತಿಸುತ್ತೇನೆ. ಈಗ ಸಾಕ್ಷಿಗೆ ಹೆಲೆಂಟ್ ಅನ್ನು ತೋರಿಸಲಾಗಿ ನೋಡಿ ಗುರುತಿಸಿದ್ದು ಹೆಲ್ಮೆಟ್ ಅನ್ನು ಮುದ್ದೆಮಾಲು 1 ಎಂದು ಗುರುತಿಸಲಾಯಿತು.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲು ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ-**

ದಿನಾಂಕ 14.02.2023 ರಂದು ನಿಮ್ಮ ಜೊತೆ ನಂಜುಂಡಯ್ಯರವರು ಜೊತೆಯಲ್ಲಿ ಇದ್ದು ಬೈಕಿನಲ್ಲಿ ಹೋಗುತ್ತಿದ್ದಿರಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ನಂಜುಂಡಯ್ಯ ಮತ್ತು ಆರೋಪಿ ನಡುವೆ ಹಿಂದೆ ಗಲಾಟೆ ಆಗಿರುವ ವಿಚಾರವಾಗಿ ಮಾತು ಮಾತಿಗೆ ಬೆಳೆದು ಆರೋಪಿಯು ಚಾಸಾ-1 ರವರಿಗೆ ಅವಾಚ್ಯ ಶಬ್ದಗಳಿಂದ ಬೈಯ್ದು ಕೈಯಿಂದ ಹಲ್ಲೆ ಮಾಡಿರುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಿಮಗೂ ಸಹ ಪ್ರಾಣ ಬೆದರಿಕೆ ಹಾಕಿದ್ದರು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಿಮಗೆ ಹೆಲ್ಮೆಟ್ ನಿಂದ ಹಲ್ಲೆ ಮಾಡಿದ ವಿಚಾರವಾಗಿ ನೀವು ಮಾಗಡಿ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದಿರುತ್ತೀರಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

**ಪಾಟೀ ಸವಾಲು ಃ- ಶ್ರೀ. ವಿಎ ಲ್ ಎನ್** ವಕೀಲರಿಂದ **ಆರೋಪಿಗಳ** ಪರವಾಗಿ ಃ-

?ನಿಮಗೆ ಕನ್ನಡ ಓದಲು ಮತ್ತು ಬರೆಯಲು ಬರುವುದಿಲ್ಲವೆಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಘಟನೆ ಆಗಿರುತ್ತದೆ ಎಂದು ಹೇಳಿರುವ ನಿರ್ಧಿಷ್ಟ ಸ್ಥಳ ಹಾಗೂ ದಿನಾಂಕ ನಿಮಗೆ ಗೊತ್ತಿರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಕತ್ತಲಲ್ಲಿ ಯಾವುದೇ ವ್ಯಕ್ತಿಯನ್ನು ಗುರುತಿಸಲು ಆಗುವುದಿಲ್ಲವೆಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಆರೋಪಿಯ ವಾಸ ಬೆಂಗಳೂರು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಆರೋಪಿಯು ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿರುವುದು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಆರೋಪಿಯ ತಂದೆಯ ಕುಟುಂಬಕ್ಕೂ ಹಾಗೂ ನಿಮ್ಮ ಕುಟುಂಬಕ್ಕೂ ಬಾತ್ರೂಮ್ ವಿಚಾರವಾಗಿ ಆಗಾಗ ಗಲಾಟೆ ಇತ್ತು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಆ ಸಂಬಂಧ

ಆರೋಪಿಯ ತಂದೆಯವರು ಸಂಬಂಧಪಟ್ಟ ಗ್ರಾಮಪಂಚಾಯ್ತಿಯಲ್ಲಿ ದೂರನ್ನು ಕೊಟ್ಟಿದ್ದರು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಆರೋಪಿ ಕುಟುಂಬ ಹಾಗೂ ನಿಮ್ಮ ಕುಟುಂಬದ ನಡುವೆ ಕ್ರಿಮಿನಲ್ ಪ್ರಕರಣಗಳು ಬಾಕಿ ಇರುತ್ತವೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಘಟನೆ ನಡೆಯಿತು ಎಂದು ಹೇಳಿದ್ದು ಆ ಸಮಯದಲ್ಲಿ ಎಷ್ಟು ಜನರು ಇದ್ದರು ಎಂದು ಹೇಳಲು ಬರುವುದಿಲ್ಲವೆಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಆಸ್ಪತ್ರೆಗೆ ಎಷ್ಟು ಗಂಟೆಗೆ ಹೋಗಿರುತ್ತೀರಿ ಎಂದರೆ ಸಾಕ್ಷಿ 10.00 ಗಂಟೆಗೆ ಎಂದು ನುಡಿಯುತ್ತಾರೆ. ಆರೋಪಿ ಹೆಲ್ಮೆಟ್ ನಿಂದ ಹಲ್ಲೆ ಮಾಡಿರುತ್ತಾರೆ ಎಂದು ಹೇಳಿದ್ದು ಇದೇ ಹೆಲ್ಮೆಟ್ ಎಂದು ಏನಾದರೂ ಗುರುತು ಇಟ್ಟುಕೊಂಡಿರುತ್ತೀರಾ ಎಂದರೆ ಸಾಕ್ಷಿ ಇದೇ ಹೆಲ್ಮೆಟ್ ನಿಂದ ಹಲ್ಲೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ವಿಶೇಷವಾಗಿ ಏನಾದರೂ ಗುರುತು ಇಟ್ಟುಕೊಂಡಿರುತ್ತೀರಾ ಎಂದರೆ ಸಾಕ್ಷಿ ನೋಡಿರುವುದಕ್ಕೆ ಹೇಳುತ್ತಿರುವುದು ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಮುದ್ದೆಮಾಲು 1 ರ ಥರಹದ ಹೆಲ್ಮೆಟ್ ಎಲ್ಲ ಕಡೆ ಸಿಗುತ್ತವೆ ಎಂದರೆ ಸಾಕ್ಷಿ ಸಿಗುತ್ತವೆ ಎಂದು ನುಡಿಯುತ್ತಾರೆ. ಮುದ್ದೆಮಾಲು 1 ಕಪ್ಪು ಮತ್ತು ನೀಲಿ ಬಣ್ಣದಿಂದ ಕೂಡಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಮುದ್ದೆಮಾಲು 1 ನೀಲಿ ಮತ್ತು ಕಪ್ಪು ಬಣ್ಣದಿಂದ ಕೂಡಿರುವುದಿಲ್ಲ ಈ ಕೇಸಿಗೋಸ್ಕರ ಸೃಷ್ಟಿಸಿಕೊಂಡಿರುತ್ತೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಅದೇ ರೀತಿ ಮೆಡಿಕಲ್ ಬಿಲ್ ಗಳನ್ನು ಸೃಷ್ಟಿ ಮಾಡಿಕೊಂಡಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಗಾಯದ ಪ್ರಮಾಣಪತ್ರದಲ್ಲಿ ಎಲ್ಲಿಯೂ ತಲೆಗೆ ಪೆಟ್ಟಾಗಿರುತ್ತದೆ ಎಂದು ಬರೆದಿರುವುದಿಲ್ಲವೆಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಸದರಿ ಗಾಯದ ಪ್ರಮಾಣಪತ್ರದ ಪ್ರಕಾರ ಘಟನೆ ಗವಿನಾಗಮಂಗಲದಲ್ಲಿ ಆಗಿರುತ್ತದೆ ಎಂದು ಬರೆದಿರುತ್ತದೆ ಎಂದರೆ ಸಾಕ್ಷಿ ಆಯಿತು ಎಂದು ನುಡಿಯುತ್ತಾರೆ, ಸಾಕ್ಷಿ ಮುಂದುವರೆದು ಸೃಷ್ಟಿ ಮಾಡಿ ಬರೆದಿರುತ್ತಾರೆ ಎಂದು ನುಡಿಯುತ್ತಾರೆ.

ನಿಮ್ಮ ಮನೆಯ ಮುಂದೆ ಚರಂಡಿ ಇದೆ ಎಂದರೆ ಸಾಕ್ಷಿ ಇಲ್ಲ ಕಾಂಕ್ರಿಟ್ ರಸ್ತೆ ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ಕಾಂಕ್ರಿಟ್ ರಸ್ತೆಯ ಮೇಲೆ ಬಿದ್ದು ಗಾಯ ಮಾಡಿಕೊಂಡು ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ನಿಮ್ಮ ಹಾಗೂ ಆರೋಪಿಯ ಕುಟುಂಬದ ನಡುವೆ ಸಿವಿಲ್ ಹಾಗೂ ಕ್ರಿಮಿನಲ್ ವ್ಯಾಜ್ಯ ಇರುವುದರಿಂದ ಹಾಗೂ ವೈಯಕ್ತಿಕ ದ್ವೇಷದಿಂದ ಆರೋಪಿಯನ್ನು ಸಿಕ್ಕಿಹಾಕಿಸಬೇಕು ಎಂಬ ಉದ್ದೇಶದಿಂದ ಸುಳ್ಳು ದೂರನ್ನು ನೀಡಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಆರೋಪಿಯು ಯಾವುದೇ ಘಟನೆಯನ್ನು ಮಾಡಿರುವುದಿಲ್ಲ ಹಾಗೂ ಆ ದಿನ ಆರೋಪಿಯು ಇದ್ದೇ ಇರಲಿಲ್ಲ ಈ ಪ್ರಕರಣಕ್ಕೋಸ್ಕರ ಮುದ್ದೆಮಾಲು 1 ಅನ್ನು ಹಾಗೂ ದಾಖಲೆಗಳನ್ನು ಸೃಷ್ಟಿಸಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಆರೋಪಿಯು ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿರುವುದರಿಂದ ತೊಂದರೆ ಕೊಡಬೇಕೆಂಬ ಉದ್ದೇಶದಿಂದ ಹಾಗೂ ಅವರಿಗೆ ಕೆಟ್ಟ ಹೆಸರು ಬರೇಕೆಂಬ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್?ಸಿ. ಮಾಗಡಿ.**